ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 9-3-2017

# ಪತ್ರಿಕಾ ಆಮಂತ್ರಣ

1. ಇ-ಆರೋಗ್ಯ ಕಾರ್ಯಕ್ರಮ:

ಒಂದು ಹೆಜ್ಜೆ ತಾಂತ್ರಿಕತೆ ಕಡೆಗೆ ಉದ್ಘಾಟನಾ ಸಮಾರಂಭ.

ಉದ್ಘಾಟನೆ:

ಕೆ. ಆರ್. ರಮೇಶ್‌ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

ಅಧ್ಯಕ್ಷತೆ:

ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಮತ್ತು ಹಜ್ ಸಚಿವರು

ದಿನಾಂಕ: 10-03-2017, ಶುಕ್ರವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ

ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಂಗಳೂರು.

2. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ

ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ:

ಸಾರ್ವಜನಿಕ ಆಸ್ಪತ್ರೆ/ಆರೋಗ್ಯ ಸೌಲಭ್ಯಗಳ ಶುಚಿತ್ವ, ನೈರ್ಮಲ್ಯ ಮತ್ತು ಸೋಂಕು ನಿಯಂತ್ರಣಕ್ಕಾಗಿ 'ಕಾಯಕಲ್ಪ' ಪ್ರಶಸ್ತಿ ಪ್ರದಾನ ಸಮಾರಂಭ 2016-17.

ಉದ್ಘಾಟನೆ:

ಕೆ. ಆರ್. ರಮೇಶ್‌ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅಧ್ಯಕ್ಷತೆ:

ಆರ್. ರೋಷನ್ ಬೇಗ್, ನಗರಾಭಿವೃದ್ಧಿ ಮತ್ತು ಹಜ್ ಸಚಿವರು

ದಿನಾಂಕ: 10-03-2017 ಶುಕ್ರವಾರ ಸಮಯ: ಮಧ್ಯಾಹ್ನ 3.00 ಗಂಟೆಗೆ

ಸ್ಥಳ: ನಂ 419, 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.

3. "ಹೃದಯಕ್ಕೆ ಸಂಬಂಧಪಟ್ಟ ತುರ್ತು ಚಿಕಿತ್ಸಾ ಕಾರ್ಯಕ್ರಮದ ತರಬೇತಿ ಕಾರ್ಯಕ್ರಮ".

<u>ಉದ್ಘಾಟನೆ:</u>

ಕೆ. ಆರ್. ರಮೇಶ್‌ಕುಮಾರ್,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

<u>ಉಪಸ್ಥಿತಿ:</u>
ಡಾ. ಶಾಲಿನಿ ರಜನೀಶ್, ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

<u>ಅಧ್ಯಕ್ಷತೆ:</u>
ಡಾ ಎಂ.ಆರ್. ಜಯರಾಮ್,
ಅಧ್ಯಕ್ಷರು,
ಗೋಕುಲ್ ಎಜುಕೇಷನ್ ಫೌಂಡೇಷನ್.

ದಿನಾಂಕ: 10-03-2017 ಶುಕ್ರವಾರ ಸಮಯ: ಸಂಜೆ 5-30 ಗಂಟೆಗೆ

ಸ್ಥಳ: ಎಂ.ಎಸ್. ರಾಮಯ್ಯ ಮೆಮೋರಿಯಲ್ ಆಸ್ಪತ್ರೆ ಸಭಾಂಗಣ, ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು.

## ಪತ್ರಿಕಾ ಪ್ರಕಟಣೆ

## ಸ್ಥಿರಾಸ್ತಿಗಳ ದರಪಟ್ಟಿ ಪರಿಷ್ಕರಣೆ ಸಾರ್ವಜನಿಕರಿಂದ ಸಲಹೆಗೆ ಅವಕಾಶ

ಬೆಂಗಳೂರು, ಮಾರ್ಚ್ 9, (ಕರ್ನಾಟಕ ವಾರ್ತೆ)

ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ರಾಜ್ಯಾದ್ಯಂತ 2017-18 ನೇ ಸಾಲಿಗೆ ಹಾಲಿ ದರಗಳಲ್ಲಿ ಇರುವಂತಹ ನ್ಯೂನತೆಗಳನ್ನು ಸರಿಪಡಿಸಿ ಸ್ಥಿರಾಸ್ತಿಗಳ ನೋಂದಣಿಗಾಗಿ ಹೊಸ ಮಾರ್ಗಸೂಚಿ ದರಪಟ್ಟಿಯನ್ನು ಪರಿಷ್ಕರಣೆ ಮಾಡಿದೆ ಹಾಗೂ ಪರಿಷ್ಕೃತ ಮಾರ್ಗಸೂಚಿ ದರಪಟ್ಟಿಯ ಅಧಿಸೂಚನೆಯನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

ಸದರಿ ಪರಿಷ್ಕೃತ ದರಗಳು ಏಪ್ರಿಲ್ 1 ರಿಂದ ರಾಜ್ಯಾದ್ಯಂತ ಜಾರಿಗೆ ಬರಲಿದೆ. ಈ ಕುರಿತು ಸಾರ್ವಜನಿಕರ ಸಲಹೆ ಸೂಚನೆ ಮತ್ತು ಆಕ್ಷೇಪಣೆಗಳಿಗಾಗಿ ಮಾರ್ಚ್ 8 ರಿಂದ 15 ದಿವಸಗಳ ಕಾಲಾವಕಾಶವನ್ನು ನೀಡಿದೆ ಎಂದು ನೋಂದಣಿ ಮತ್ತು ಮುದ್ರಾಂಕ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಎಂಆರ್ಎಂ:ಬಿಜಿಪಿ:ಜಿಪಿಆರ್.

## ಏಪ್ರಿಲ್ 9 ರಂದು
## ನಂಜನಗೂಡು ಮತ್ತು ಗುಂಡ್ಲುಪೇಟೆ ಕ್ಷೇತ್ರ ಉಪ ಚುನಾವಣೆ

ಬೆಂಗಳೂರು, ಮಾರ್ಚ್ 9, (ಕರ್ನಾಟಕ ವಾರ್ತೆ)

ರಾಜ್ಯದ 214-ನಂಜನಗೂಡು (ಪ.ಜಾ) ಮತ್ತು 224- ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯು ಏಪ್ರಿಲ್ 9 ರಂದು ನಡೆಯಲಿದೆ ಎಂದು ಭಾರತ ಚುನಾವಣಾ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ.

ಮಾರ್ಚ್ 14ರಂದು ಅಧಿಸೂಚನೆ ಹೊರಡಿಸುವಿಕೆ, ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು, ಮಾರ್ಚ್ 21 ರಂದು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿರುತ್ತದೆ. ಮಾರ್ಚ್ 22 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಮಾರ್ಚ್ 24 ರಂದು ನಾಮಪತ್ರ ಹಿಂಪಡೆಯಲು ಕೊನೆಯ ದಿನ. ಏಪ್ರಿಲ್ 9 ಮತದಾನ, ಏಪ್ರಿಲ್ 13 ರಂದು ಮತ ಎಣಿಕೆ ಕಾರ್ಯ ನಡೆಯಲಿದೆ ಎಂದು ಚುನಾವಣಾ ಆಯೋಗ ಪ್ರಕಟಣೆಯಲ್ಲಿ ತಿಳಿಸಿದೆ.

ಎಂಆರ್ಎಂ:ಜೆಡಿ:ಜಿಪಿಆರ್.

## "ಮೆಟ್ರೋ ಬೆಂಗಳೂರು ಸಂತೆ"

ಬೆಂಗಳೂರು, ಮಾರ್ಚ್ 9, (ಕರ್ನಾಟಕ ವಾರ್ತೆ)

ನಮ್ಮ ಮೆಟ್ರೋದಿಂದ ಸ್ವಾಮಿ ವಿವೇಕಾನಂದ ರಸ್ತೆಯಲ್ಲಿನ ಮೆಟ್ರೋ ನಿಲ್ದಾಣದಲ್ಲಿ "ಲಘು ಉದ್ಯೋಗ ಭಾರತಿ-ಕರ್ನಾಟಕ" ಶಾಖೆಯ ಮಹಿಳಾ ಘಟಕವು ಬಿಎಂಆರ್‌ಸಿಎಲ್

ಸಹಯೋಗದಲ್ಲಿ  ಮಾರ್ಚ್ 11 ಮತ್ತು 12 ರಂದು ಮಹಿಳಾ ಉದ್ಯಮಿಗಳ ಕರಕುಶಲ ಮೇಳ 'ಬೆಂಗಳೂರು ಸಂತೆ' ಕಾರ್ಯಕ್ರಮವನ್ನು ಆಯೋಜಿಸಿದೆ.

ಸಣ್ಣ ಮತ್ತು ಅತೀ ಸಣ್ಣ ಮಹಿಳಾ ಉದ್ಯಮಿಗಳನ್ನು ಉತ್ತೇಜಿಸಿ ನಮ್ಮ ಮೆಟ್ರೋ ನಿಲ್ದಾಣದ ಜಾಗವನ್ನು ಮಹಿಳಾ ಕುಶಲ ಕರ್ಮಿಗಳು ಉಪಯೋಗಿಸಿಕೊಂಡು ನೇರ ಕೌಶಲ್ಯ ಆಧಾರಿತ ಕಾರ್ಯಾಗಾರ, ಮಹಿಳಾ ಸಾಧಕರೊಂದಿಗೆ ನೇರ ಚರ್ಚೆ, ಮುಂತಾದ ಕಾರ್ಯಕ್ರಮಗಳು ಜರುಗಲಿವೆ..

ಲಘು ಉದ್ಯೋಗ ಭಾರತಿ-ಕರ್ನಾಟಕ ಶಾಖೆಯ ಮಹಿಳಾ ಘಟಕದ ವರ್ಷಾಚರಣೆ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.  ಬೆಂಗಳೂರು ಸಂತೆಯನ್ನು ಮಾರುಕಟ್ಟೆ ತಾಣವಾಗಿಸಿ ಮಹಿಳಾ ಉದ್ಯಮಿಗಳಿಗೆ ಜಾಗತಿಕ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ತಾಂತ್ರಿಕತೆ, ಪ್ರಸ್ತುತ ಮಹಿಳಾ ಉದ್ಯಮಿಗಳೂ ಎಂಬ ಕುರಿತು ಗೋಷ್ಠಿಗಳು ನಡೆಯಲಿವೆ. ಮಹಿಳಾ ಸಾಧಕಿಯರ ಜತೆ ಸಂವಾದ ಇರುತ್ತದೆ.  ಸ್ವರಕ್ಷಣೆ, ಚಿತ್ರಕಲೆ, ಅಡುಗೆ ಮನೆ ಅಲಂಕಾರ, ಮಳೆನೀರು ಕೊಯ್ಲು, ಕ್ವಿಲಿಂಗ್ ಉಪಯೋಗಿಸಿದ ಬಟ್ಟೆಗಳಿಂದ ಕಲಾತ್ಮಕ ವಿನ್ಯಾಸ ರೂಪಿಸುವುದು, ಆರೋಗ್ಯ ಕಾಳಜಿ, ಒತ್ತಡ ನಿರ್ವಹಣೆ ಕುರಿತು ಕಾರ್ಯಾಗಾರಗಳು ನಡೆಯಲಿವೆ. ಇದರಲ್ಲಿ ಮಹಿಳಾ ಉದ್ಯಮಿಗಳೂ ಭಾಗವಹಿಸಿ ತಮ್ಮ ಉತ್ಪನ್ನ ಪ್ರದರ್ಶನ, ಮಾರಾಟ ಮಾಡಬಹುದಾಗಿದೆ.